ANDOLANA 18 FEB 2008

# ಇಶಾದ 'ಸದ್ಗುರು'ವಿಗೆ ಅಭಿನಂದನೆ

ಮೈಸೂರು,ಫೆ.೧೭-ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಹುಟ್ಟಿ ಬೆಳೆದು ತಮಿಳುನಾಡಿನ ಕೊಯಮತ್ತೂರಿನಲ್ಲಿ ಇಶಾ ಪ್ರತಿಷ್ಠಾನ ಸ್ಥಾಪಿಸಿ ವಿಶ್ವದ ಗಮನ ಸೆಳೆದಿರುವ ಆಧ್ಯಾತ್ಮ, ಆರ್ಥಿಕ, ಸಾಮಾಜಿಕ ಚಿಂತಕ ಸದ್ಗುರು ಜಗ್ಗಿ ವಾಸುದೇವ್ ಅವರನ್ನು ನಗರದಲ್ಲಿಂದು ಅಭಿನಂದಿಸಲಾಯಿತು.

ಸ್ವಿಜರ್ಲ್ಯಾಂಡಿನ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಚರ್ಚಾಕೂಟದಲ್ಲಿ ಭಾಗ ವಹಿಸಿ ಸತತ ಮೂರನೇ ಬಾರಿ ವಿಷಯ ಮಂಡಿಸಿದ ಅವರನ್ನು ರೋಟರಿ ಮೈಸೂರು ಮತ್ತು ವಿಜಯ ಫೌಂಡೇಷನ್ ಜಂಟಿಯಾಗಿ ಹೋಟೆಲ್ ರಿಗಾಲಿಸ್‌ನಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ರೈಟ್ ಲೈವ್ಲಿಹುಡ್ ಪ್ರಶಸ್ತಿ ವಿಜೇತ ಡಾ.ಎಚ್.ಸುದರ್ಶನ್, ಪತ್ರಿಕೋದ್ಯಮಿ ಕೆ.ಬಿ. ಗಣಪತಿ, ಉದ್ಯಮಿ ಪಿ.ವಿ. ಗಿರಿ, ವಿಜಯಾ ಪ್ರತಿಷ್ಠಾನದ ಅಧ್ಯಕ್ಷ ಬಿ.ಆರ್. ಪೈ ಮುಂತಾದವರು ಸನ್ಮಾನಿಸಿದರು.




ಸ್ವಿಜರ್ಲ್ಯಾಂಡಿನ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಚರ್ಚಾಕೂಟದಲ್ಲಿ ಭಾಗ ವಹಿಸಿ ಸತತ ಮೂರನೇ ಬಾರಿ ವಿಷಯ ಮಂಡಿಸಿದ ಆಧ್ಯಾತ್ಮ, ಆರ್ಥಿಕ, ಸಾಮಾಜಿಕ ಚಿಂತಕ ಸದ್ಗುರು ಜಗ್ಗಿ ವಾಸುದೇವ್ ಅವರನ್ನು ಪತ್ರಿಕೋದ್ಯಮಿ ಕೆ.ಬಿ. ಗಣಪತಿ ಅವರು ಸನ್ಮಾನಿಸಿದರು. ಉದ್ಯಮಿ ಪಿ.ವಿ. ಗಿರಿ, ವಿಜಯಾ ಪ್ರತಿಷ್ಠಾನದ ಅಧ್ಯಕ್ಷ ಬಿ.ಆರ್. ಪೈ ಹಾಜರಿದ್ದರು.

ಕಾರ್ಯಕ್ರಮಕ್ಕೆ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಗ್ಗಿ ವಾಸುದೇವ್ ಜಗತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಮುಂದುವರಿದಿದೆ. ಆದರೆ ಮನುಷ್ಯ ತನ್ನ ಆಂತರಿಕ ತಂತ್ರಜ್ಞಾನವನ್ನು ಸಮತೋಲನದಲ್ಲಿರಿಸಿಕೊಳ್ಳಲು ಆದ್ಯತೆ ನೀಡಿದರೆ ಆಯುರಾರೋಗ್ಯ ಪ್ರಾಪ್ತಿಯಾಗುತ್ತದೆ ಎಂದರು.

ಭಾರತದಲ್ಲಿರುವ ಜನಸಂಖ್ಯೆಗನುಗುಣವಾಗಿ ವಿದ್ಯೆ, ಆರೋಗ್ಯ ಮತ್ತಿತರ ಸೌಲಭ್ಯಗಳನ್ನು ಒದಗಿಸಿದರೆ ಯಾವುದೇ ದೇಶವನ್ನು, ಯಾವುದೇ ವಿಷಯದಲ್ಲಿ ಹಿಂದಿಕ್ಕಬಲ್ಲ ಸಾಮರ್ಥ್ಯವನ್ನು ಗಳಿಸಿಕೊಳ್ಳಬಹುದಾಗಿದೆ. ಪ್ರಾಣಿ-ಪಕ್ಷಿ-ಮರಗಳನ್ನು ಪೂಜಿಸುತ್ತಿದ್ದರೂ ನಿಜ ಅರ್ಥದಲ್ಲಿ ಭಾರತ ದೇವರಿಲ್ಲದ ದೇಶ. ಇಲ್ಲಿನ ಎಲ್ಲ ಚಿಂತನೆಗಳ ಪರಮಗುರಿ ಮುಕ್ತಿ ಪಡೆಯುವುದಾಗಿದೆ ಎಂದು ಅವರು ಹೇಳಿದರು.

ಇಶಾ ಪ್ರತಿಷ್ಠಾನ ಒಂದೇ ದಿನ ಅತ್ಯಧಿಕ ಗಿಡಗಳನ್ನು ನೆಟ್ಟು ದಾಖಲೆ ನಿರ್ಮಿಸಿದೆ. ಈ ವರ್ಷ ಒಟ್ಟು ೨೫ ಮಿಲಿಯ ಸಸಿಗಳನ್ನು ನೆಡುವ ಉದ್ದೇಶವಿದೆ ಎಂದು ಅವರು ತಿಳಿಸಿದರು.

ಇಶಾ ಫೌಂಡೇಷನ್ ಯಾವುದೇ ಪಂಥಕ್ಕೆ ಸೇರದ, ಲಾಭದ ಉದ್ದೇಶವಿಲ್ಲದ ವಾಣಿಜ್ಯೇತರ ಸಾರ್ವಜನಿಕ ಸೇವಾ ಸಂಸ್ಥೆ. ಇದು ಎಲ್ಲರ ಭೌತಿಕ, ಮಾನಸಿಕ ಹಾಗೂ ಆಂತರಿಕ ವಿಕಾಸಗಳ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿಯುತ್ತಿರುವ ಸಂಸ್ಥೆ. ಯೋಗ ಕಾರ್ಯಕ್ರಮಗಳೊಂದಿಗೆ ಸಮಾಜ ಹಾಗೂ ಪರಿಸರ ವೃದ್ಧಿಗೆ ಉಪಯುಕ್ತ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆ. ಮಾನವಕುಲದ ಅಭಿವೃದ್ಧಿಗೆ ಹಲವು ವಿಶೇಷ ಯೋಜನೆಗಳನ್ನು ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಜನತೆಯ ಸರ್ವತೋಮುಖ ಅಭಿವೃದ್ಧಿ, ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ, ಪರಿಸರ ಸಂರಕ್ಷಣೆ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಇಶಾದ ಯೋಗ ಕಾರ್ಯಕ್ರಮಗಳು ವ್ಯಕ್ತಿಯ ಆಂತರಿಕ ಏಳಿಗೆಗೆ ಸಹಕಾರಿಯಾಗಿದೆ. ಇಶಾ ಯೋಗದ ಕಾರ್ಯಕ್ರಮವು ಜಗತ್ತಿನಾದ್ಯಂತ ಮಾನ್ಯತೆ ಪಡೆದು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯಿಂದ ಪ್ರಶಂಸೆಗೆ ಒಳಗಾಗಿದೆ.

೧೯೯೨ರಲ್ಲಿ ಪ್ರಾರಂಭಿಸಿದ ಇಶಾ ಫೌಂಡೇಷನ್ ಸಂಸ್ಥೆಯು ತಮಿಳುನಾಡಿನ ಕೊಯಮತ್ತೂರು ನಗರದ ಹತ್ತಿರದ ವೆಲ್ಲಯ್ಯನಗಿರಿ ಬೆಟ್ಟಗಳ ತಪ್ಪಲಿನಲ್ಲಿ ಕೇಂದ್ರವನ್ನು ಹೊಂದಿದೆ. ಜಗತ್ತಿನಲ್ಲಿ ೧೫೦ಕ್ಕೂ ಹೆಚ್ಚು ಕೇಂದ್ರಗಳ ಸಾವಿರಾರು ಸ್ವಯಂಸೇವಕರು ಮನುಕುಲದ ಏಳಿಗೆಗೆ ಶ್ರಮಿಸುತ್ತಿದ್ದಾರೆಂದು ಅವರು ತಿಳಿಸಿದರು.